ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)124(100)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿನ ದೋಣಿ ತಾಂಡಾದಿಂದ ಕಪ್ಪತ್ ಗುಡ್ಡ ಚಿಕ್ಕವಡ್ಡಟ್ಟಿ ರಸ್ತೆ ಕಾಮಗಾರಿ ಮಂಜೂರಾಗಿದ್ದು, ಯಾವಾಗ; ಎಷ್ಟು ಅವಧಿಯಲ್ಲಿ ಮುಗಿಯಬೇಕಾಗಿತ್ತು;

ಆ) ಪುನಃ ಈ ಕಾಮಗಾರಿ ಪ್ರಾರಂಭವಾಗಿದ್ದು, ಕಳಪೆ ಕಾಮಗಾರಿ ನಡೆಯುತ್ತಿದ್ದು, ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಈ ಕಾಮಗಾರಿ ಪ್ರಾರಂಭಿಸಿ ಯಾವಾಗ ಪೂರ್ಣ ಗೊಳಿಸ ಲಾಗುವುದು?

ಶ್ರೀ ಸಿ.ಎಂ.ಉದಾಸಿ

ಅ) ಗದಗ ಜಿಲ್ಲೆಯ ಮುಂಡರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೋಣಿ ತಾಂಡಾದಿಂದ ಕಪ್ಪತ್ ಗುಡ್ಡ ಚಿಕ್ಕವಡ್ಡಟ್ಟಿ ರಸ್ತೆಯು 13.50 ಕಿ.ಮೀ. ಉದ್ದ ಇದ್ದು, ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆಯ ಹಂತ–3 ರಡಿಯಲ್ಲಿ ರೂ. 87.13 ಲಕ್ಷಗಳ ಅಂದಾಜು ಮೊತ್ತಕ್ಕೆ 2003–04ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ. ಈ ರಸ್ತೆ ಕಾಮಗಾರಿಯನ್ನು ಶ್ರೀ. ಜಿ.ಹೆಚ್.ದ್ಯಾಮನಗೌಡರ, ಗುತ್ತಿಗೆದಾರರಿಗೆ ದಿನಾಂಕ:11–06–2004 ರಲ್ಲಿ ವಹಿಸಲಾಗಿದ್ದು, 9 ತಿಂಗಳ ಟೆಂಡರ್ ಗುತ್ತಿಗೆ ಅವಧಿಯಂತೆ ದಿನಾಂಕ 10–03–2005 ರೊಳಗಾಗಿ ಕಾಮಗಾರಿ ಪೂರ್ಣಗೊಳಿಸಬೇಕಾಗಿತ್ತು.

ಆ) ಕಾಮಗಾರಿಯ ಬಗ್ಗೆ ಸೂಕ್ತ ಪರಿಶೀಲನೆಯನ್ನು ಮಾಡಿಸಿ ಗುತ್ತಿಗೆದಾರರು ಮಾಡಿದ ಕೆಲಸಗಳು ಕಳಪೆ ಮಟ್ಟದ್ದು ಎಂದು ಕಂಡು

ಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಟೆಂಡರ್ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಇ) ಡಾಂಬರೀಕರಣ ಕೆಲಸ ಮಾತ್ರ ಇರುವುದರಿಂದ ಸದ್ಯಕ್ಕೆ ಮಳೆಗಾಲ ಪ್ರಾರಂಭವಾಗಿದ್ದು, ಮಳೆಗಾಲದ ನಂತರ ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)125(102)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿಕ್ಷಕರ ವರ್ಗಾವಣೆ ಕಾಯಿದೆ ಜಾರಿಯಲ್ಲಿ ಬಂದಿದೆಯೇ;

ಆ) ಇಲ್ಲವಾದಲ್ಲಿ, ಇದಕ್ಕೆ ಕಾರಣವೇನು?

ಶ್ರೀ ಎಸ್.ಬಸವರಾಜ ಹೊರಟ್ಟಿ

ಅ) ಪ್ರಸ್ತುತ ಜಾರಿಯಲ್ಲಿರುವುದಿಲ್ಲ.

ಆ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧ್ಯಾದೇಶ, 2006ನ್ನು ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಅನಮೋದಿಸುವ ಅಗತ್ಯತೆ ಇರುತ್ತದೆ.